ಇಲಾಖೆಯಲ್ಲಿ ಸಸಿಗಳನ್ನು ಬೆಳಿಸುವುದರಲ್ಲಿ ಹಣ ದುರುಪಯೋಗವಾಗಿದೆ ಎನ್ನುವ ಅಂಶವನ್ನು ತಿಳಿಸಿದ್ದಾರೆ, ಆ ಬಗ್ಗೆ ನಿರ್ದಿಷ್ಟ ವಾದಂಥ ಆಪಾದನೆಯನ್ನು ಸನ್ಮಾನ್ಯ ಸದಸ್ಯರು ಕೊಟ್ಟರೆ ಆ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ —ಈಗ ವೆಣಸಿನ ಗಿಡಗಳನ್ನು ಬೆಳಿಸತಕ್ಕ ಹೊಸ ಸ್ಕೀಮ್ ಪ್ರಾರಂಭವಾಗಿದೆ ಇದನ್ನು ಯಾವ ಉದ್ದೇಶದಿಂದ ಬೆಳಿಸುತ್ತೀರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಇನ್ನು ಖಾಸಗಿಯಾಗಿ ಮರ ಬೆಳಿಸತಕ್ಕವರು ಮಾರಾಟ ಮಾಡುತ್ತಿದ್ದಾರೆ ಅದರ ಬಗ್ಗೆಯೂ ಸಹ ಮಾನ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ಶ್ರೀ ಜಿ. ಎಸ್. ಬಾಗಲಕೋಟಿ.—ಖಾಸಗಿ ಮರ ಬೆಳಿಸುವ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ ಅದರ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ. ಇನ್ನು ಮಾನ್ಯ ಸದಸ್ಯರು ವೆಣಸಿನ ಸಸಿ ಬೆಳಿಸುವ ಉದ್ದೇಶ ಕೇಳಿದ್ದಾರೆ. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ವೆಣಸಿನ ಗಿಡ ಮರದ ಜೊತೆ ಬೆಳೆಯುವಂತಾದ್ದು, ಕೊಡಗು ಇನ್ನಿತರೇ ಕಡೆ ಅದಕ್ಕೆ ಹೆಚ್ಚಿಗೆ ಬೇಡಿಕೆ ಇರುವುದರಿಂದ ಮೂರು ನಾಲ್ಕು ವರ್ಷಗಳಿಂದ ಅರಣ್ಯ ಇಲಾಖೆಯವರು ಅಂತಹ ಸಸಿಗಳನ್ನು ಬೆಳಿಸಿ ಬಡ ರೈತರಿಗೆ ಕೊಡುವಂತಹ ಅವಶ್ಯಕತೆ ಇದೆ, ಎಂದು ಬೆಳಿಸುತ್ತಿದ್ದಾರೆ,

ಚಿಕ್ಕಮಂಗಳೂರು ಜಿಲ್ಲೆಗೆ ಹಾಲಿನ ಡೈರಿ

೨೩೧೧ ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ವಸತಿ ಮತ್ತು ಪಶು ಸಂಗೋಪನ ಪಶುವೈದ್ಯ ಸೇವಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತ್ಯೇಕ ಹಾಲಿನ ಡೈರಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನರಸಿಂಹರಾಜಪುರ ತಾಲ್ಲೂಕಿನ ಬಾಳೆಹೊನ್ನೂರಿನಲ್ಲಿರುವ ಹಾಲು ಶೀತಲೀಕರಣ ಕೇಂದ್ರವು ಸಮರ್ಪಕವಾಗಿ ಕೆಲವಾರು ವರ್ಷಗಳಿಂದ ಕೆಲಸ ನಿರ್ವಹಿಸದೆ ಇರುವುದರಿಂದ ಮಲೆನಾಡು ಪ್ರದೇಶವಾದ ಕೊಪ್ಪ ಹಾಲು ಉತ್ಪಾದಕರ ಸಂಘಗಳಲ್ಲಿ ಹಾಲು ಸಂಗ್ರಹಣಾ ಮಾರ್ಗವು ಸರಿ ಇಲ್ಲದಿರುವುದರಿಂದ ಸಹಕಾರ ಸಂಘಗಳು ಮುಚ್ಚುವ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಹಾಲಿನ ಡೈರಿಯನ್ನು ಪ್ರಾರಂಭಿಸಲು ಮತ್ತು ಬಾಳೆಹೊನ್ನೂರಿನ ಶೀತಲೀಕರಣ ಕೇಂದ್ರವು ಸರಿಯಾಗಿ ನಡೆಯುವಂತೆ ಸರ್ಕಾರವು ಕ್ರಮಕೈಗೊಳ್ಳುವುದೆ?

ಶ್ರೀ ಮಹಮ್ಮದ್ ಪೊಯಿನಾದ್ವೀನ್ (ವಸತಿ ಹಾಗೂ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು).—

ಅ) ಹೌದು.

ಆ) ಹೌದು

ಇ) ಚಿಕ್ಕಮಗಳೂರಿನಲ್ಲಿ ಹಾಲಿನ ಡೈರಿಯನ್ನು ಸ್ಥಾಪಿಸುವ ವಿಚಾರ ಸದ್ಯಕ್ಕೆ ಸರ್ಕಾರದ ಮುಂದಿಲ್ಲ. ಬಾಳೆಹೊನ್ನೂರಿನಲ್ಲಿ ಶೀಘ್ರದಲ್ಲಿಯೇ ೨೦೦೦ ಲೀಟರ್ ಸಾಮರ್ಥ್ಯದ ಫಾರ್ಮ್ ಕೂಲರ್ ಅನ್ನು ಸ್ಥಾಪಿಸಿ ಕಾರ್ಯಗತಗೊಳಿಸಲು ಕ್ರಮ ಜರುಗಿಸಲಾಗುತ್ತದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಉಪಾಧ್ಯಕ್ಷರೆ, ನನ್ನ ''ಆ'' ಪ್ರಶ್ನೆ 'ನರಸಿಂಹರಾಜಪುರ ತಾಲ್ಲೂಕಿನ ಬಾಳೆಹೊನ್ನೂರಿನಲ್ಲಿರುವ ಹಾಲು ಶೀತಲೀಕರಣ ಕೇಂದ್ರವು ಸಮರ್ಪಕವಾಗಿ ಕೆಲವಾರು ವರ್ಷಗಳಿಂದ ಕೆಲಸ ನಿರ್ವಹಿಸದೆ ಇರುವುದರಿಂದ ಮಲೆನಾಡು ಪ್ರದೇಶವಾದ ಕೊಪ್ಪ ಹಾಲು ಉತ್ಪಾದಕರ ಸಂಘಗಳಲ್ಲಿ ಹಾಲು ಸಂಗ್ರಹಣಾ ಮಾರ್ಗವು ಸರಿ ಇಲ್ಲದಿರುವುದರಿಂದ ಸಹಕಾರ ಸಂಘಗಳು ಮುಚ್ಚುವ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ' ಎಂದು ಕೇಳಿರುವುದಕ್ಕೆ 'ಬಂದಿದೆ'ಎಂದು ಉತ್ತರವನ್ನು ಕೊಟ್ಟಿದ್ದಾರೆ. ಸ್ವಾಮಿ, ೧೯೮೨-೮೩ರಲ್ಲಿ ಈ ಶೀತಲೀಕರಣ ಯಂತ್ರವನ್ನು ಇನ್‌ಸ್ಟಾಲ್ ಮಾಡಿದ್ದಾರೆ. ಆದು ಇದುವರೆಗೂ ಸಮರ್ಪಕವಾಗಿ ಕೆಲಸವನ್ನು ಮಾಡುತ್ತಿಲ್ಲ ಎಂಬ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ಮತ್ತು ಇಲಾಖೆಯವರ

ಗಮನಕ್ಕೆ ತಂದಿದ್ದೇನೆ. ಆದರೂ ಸಂಬಂಧಪಟ್ಟ ಇಲಾಖೆಯವರು ಸುಮಾರು ೪ ವರ್ಷಗಳಿಂದಲೂ ಇದರ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಳ್ಳದೆ ಸುಮ್ಮನಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ದಯವಿಟ್ಟು ಹೇಳಬೇಕು.

ಇನ್ನು ಚಿಕ್ಕಮಗಳೂರಿನಲ್ಲಿ ಹಾಲಿನ ಡೈರಿಯನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೀರಿ, ಶಿವಮೊಗ್ಗದಲ್ಲಿ ಏನು ಡೈರಿ ಇದೆ ಅಲ್ಲೇ ಸಾಕಷ್ಟು ಹಾಲು ಬರುತ್ತಿದೆ. ಆದ್ದರಿಂದ ಮತ್ತೆ ಚಿಕ್ಕಮಗಳೂರಿನ ಡೈರಿ ಅವಶ್ಯಕತೆ ಇಲ್ಲವೆಂದು ತಿಳಿದುಕೊಂಡು ಹೇಳಿರಬಹುದು. ಕೊಪ್ಪ, ಶೃಂಗೇರಿಯಿಂದ ಹೋಗತಕ್ಕ ಹಾಲನ್ನು ಸುಮಾರು ೮ ತಿಂಗಳಿಂದ ನಿಲ್ಲಿಸಿದ್ದಾರೆ. ಅಲ್ಲಿ ೭೮ ಹಾಲು ಉತ್ಪಾದಕರ ಕೋ ಆಪರೇಟಿವ್ ಸೊಸೈಟಿಗಳು ಪ್ರಾರಂಭವಾಗಿ ಮಿಲ್ಕ್ ರೂಟ್ ಪ್ರಾರಂಭವಾಗಿ ವ್ಯಾಪಾರವನ್ನು ನಡೆಸುತ್ತಿದ್ದರು. ಈಗ ಸುಮಾರು ತಿಂಗಳುಗಳಿಂದ ವ್ಯಾಪಾರ ಬರದೇ ಇರುವುದರಿಂದ ಐ.ಆರ್.ಡಿ.ಪಿ. ಯೋಜನೆಯ ಅಡಿಯಲ್ಲಿ ಸಾಲವನ್ನು ತೆಗೆದುಕೊಂಡಿರುವವರು ಯಾರಿದ್ದಾರೆ ಅವರೆಲ್ಲರಿಗೂ ಬಹಳ ತೊಂದರೆಯಾಗಿದೆ. ವ್ಯವಸಾಯಗಾರರಿಗೆ ತೊಂದರೆಯಾಗಿದೆ.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಜುಲೈ ತಿಂಗಳ ಕೊನೆಯಲ್ಲಿ ಈ ೧೫ ಸೊಸೈಟಿಗಳು ಆರ್ಗನೈಸ್ ಆದಮೇಲೆ ಬಾಳೆಹೊನ್ನೂರಿನ ಶೀತಲೀಕರಣ ಯಂತ್ರವು ಜೆನ್ನಾಗಿ ಕೆಲಸ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ,

ಇನ್ನು ಎರಡನೆಯದಾಗಿ ಶಿವಮೊಗ್ಗಾ ಹತ್ತಿರವಿದೆಯೋ ಅಥವಾ ಹಾಸನ ಹತ್ತಿರವಿದೆಯೋ ಎಂಬುದನ್ನು ನೋಡಿ ಯಾವುದನ್ನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಪರಿಶೀಲಿಸುತ್ತೇನೆ. The whole matter will be examined. and if it found feasible we will certainly agree to the suggestion of the hon. Member.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಬಾಳೆಹೊನ್ನೂರಿನಲ್ಲಿ ೧೫ ಕೋ ಆಪರೇಟಿವ್ ಸೊಸೈಟಿಗಳಾದರೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೀರಿ. ಆದರೆ ಈ ೧೫ ಕೋ ಆಪರೇಟಿವ್ ಸೊಸೈಟಿಗಳನ್ನು ಆರ್ಗನೈಸ್ ಮಾಡತಕ್ಕ ಜವಾಬ್ದಾರಿ ಯಾರ ಮೇಲಿದೆ ಎಂಬುದನ್ನು ತಿಳಿಸಬೇಕು. ಇವನ್ನು ಮಾಡಬೇಕಾದವರು ಯಾರು?

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಕರ್ನಾಟಕ ಮಿಲ್ಕ್ ಫೆಡರೇಷನ್ ಮತ್ತು ಹಾಸನ ಜಿಲ್ಲಾ ಮಿಲ್ಕ್ ಪ್ರೊಡ್ಯೂಸರ್ಸ್ ಕೋ ಆಪರೇಟಿವ್ ಸೊಸೈಟೀಸ್‌ನ ಯೂನಿಯನ್‌ನವರೂ ಸೇರಿ ಮಾಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಇನ್ನು ೧೫ ದಿವಸದೊಳಗೆ ಇದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಮಹಮ್ಮದ್ ಮೊಯಿನುದ್ದೀನ್.—೧೫ ದಿವಸದೊಳಗೆ ಎಂದು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಬೇಗ ಮಾಡಿಸುವುದಕ್ಕೆ ಸೊಸೈಟಿಯಿಂದ ಆದೇಶವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Public Undertakings in the State.

2616. SRI MALLIKARJUNA M. KHARGE (Gurumittakal).— Will the Minister for Industries and power be pleased to State,

a) The total number of public Undertaking (with names) in the State (Details may be furnished)?

b) The Total loss incurred by each Public Undertaking during the years 1985–86, 1986–87 to 1987–88 (Year wise information be furnished)?